**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 54/2022 ಪಿ.ಡಬ್ಲ್ಯೂಃ 2

ಸಿ.ಡಬ್ಲ್ಯೂಃ 3

| | |
|---|---|
| ಸಾಕ್ಷಿದಾರರ ಹೆಸರು | ಉದಯ |
| ತಂದೆಯ ಹೆಸರು | ಬಾಡು |
| ವಯಸ್ಸು | 33 ವರ್ಷ |
| ಉದ್ಯೋಗ | ಕಸ ವಿಲೇವಾರಿ, ಬಡಾ ಗ್ರಾಮ ಪಂಚಾಯತ್ , ಉಚ್ಚಿಲ |
| ವಿಳಾಸ | ಪಾದೇಬೆಟ್ಟು |

ದಿನಾಂಕಃ 23-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ಚಾಸಾ -1 ಗೊತ್ತು. ನಾನು ಪಂಚಾಯಿತಿಯಲ್ಲಿ ಕಸ ವಿಲೇವಾರಿ ಕೆಲಸ ಮಾಡುತ್ತಿದ್ದುರಿಂದ ಗೊತ್ತು. ಚಾಸಾ-1 ಅಲ್ಲಿ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿದ್ದರು. ಕಸ ವಿಲೇವಾರಿ ಘಟಕ ಬಡಾ ಗ್ರಾಮದಲ್ಲಿ ಮೀನು ಮಾರುಕಟ್ಟೆ ಬಳಿ ಇದೆ. ನನಗೆ ಚಾಸಾ-4 ಗೊತ್ತು. ಆತ ನನ್ನ ತಮ್ಮ. ಆತನೂ ಸಹ ನನ್ನೊಂದಿಗೆ ಅಲ್ಲಿಯೇ ಕೆಲಸ ಮಾಡುತ್ತಾನೆ. ಕಸ ಸಂಗ್ರಹಿಸಲು ಪಂಚಾಯಿತಿಯ ವಾಹನದಲ್ಲಿ ಹೋಗುತ್ತೇವೆ. ಅದರ ಚಾಲಕ ಚಾಸಾ-2. ನಾವು ಗ್ರಾಮದ 3 ಸಾವಿರ ಮನೆಗಳಿಂದ ಕಸ ಸಂಗ್ರಹಿಸುತ್ತೇವೆ. ಆ ಕಸವನ್ನು ನಮ್ಮ ವಿಲೇವಾರಿ ಘಟಕದಲ್ಲಿ ಹಾಕುತ್ತೇವೆ. ಅಲ್ಲಿ ಒಣ ಮತ್ತು ಹಸಿ ಕಸ ಬೇರ್ಪಡಿಸಿ, ಉಳಿದ ಕಸವನ್ನು ಗೋಣಿ ಚೀಲಕ್ಕೆ ಹಾಕಿ, ಕಟ್ಟಿ ಇಡುತ್ತೇವೆ. ಅಲ್ಲಿ ಕಟ್ಟಿಟ್ಟ ಕಸದಿಂದಾಗಿ ಊರಿನವರಿಗೆ ತೊಂದರೆ ಆಗಿತ್ತು ಎಂದು, ದೂರು ಮಾಡಿದ್ದರು. ಅದಕ್ಕಾಗಿ ಪ್ರೊಲ್ಯ ಬಳಿ ಪ್ರತ್ಯೇಕ ಜಾಗವನ್ನು ಪಂಚಾಯಿತಿಯವರು ಪ್ರತ್ಯೇಕ ಜಾಗವನ್ನು ಗುರುತಿಸಿಕೊಟ್ಟಿದ್ದರು. ಅಲ್ಲಿ ಕಟ್ಟಿ ಇಟ್ಟಕಸವನ್ನು ಹಾಕಲು ಗುರುತಿಸಿ ಕೊಟ್ಟಿದ್ದರು.

2) ಸುಮಾರು 3 ವರ್ಷಗಳ ಹಿಂದೆ ಮೀನು ಮಾರುಕಟ್ಟೆ ಬಳಿ ಕಟ್ಟಿ ಇಟ್ಟಿದ್ದ ಕಸವನ್ನು ಮುಸ್ಲಿಮರ ಟೆಂಪೋದಲ್ಲಿ ತೆಗೆದುಕೊಂಡು ನಾನು ಮತ್ತು ಚಾಸಾ-4, ಮತ್ತು ಇಬ್ಬರು ಕಾರ್ಮಿಕರು, ಮತ್ತು ಚಾಲಕನೊಂದಿಗೆ ಕಟ್ಟಿ ಇಟ್ಟಿದ್ದ ಕಸವನ್ನು ಲೋಡ್ ಮಾಡಿಕೊಂಡು, ಪೊಳ್ಯದ ಹೊಸ ಜಾಗೆಗೆ ಹೋಗಿದ್ದೆವು. ಆಗ ಚಾಸಾ -1 ಮತ್ತು 2 ನಮ್ಮೊಂದಿಗೆ ಇದ್ದರು. ನಾವು ಟೆಂಪೋದಲ್ಲಿ ಹೋಗುತ್ತಿದ್ದಾಗ, ಚಾಸಾ-1 ಮತ್ತು 2 ಕಾರಿನಲ್ಲಿ ಬಂದಿದ್ದರು. ನಾವು ಅವರನ್ನು ಹಿಂಬಾಲಿಸಿ ಹೋಗಿದ್ದೆವು. ನಾವು ಕಸವನ್ನು ಹಾಕಬೇಕಾಗಿದ್ದ ಜಾಗೆಯವರೆಗೆ ನಮ್ಮ ಟೆಂಪೋ ಹೋಗುತ್ತಿರಲಿಲ್ಲ, ಅದನ್ನು ಹತ್ತಿರದ ರಸ್ತೆಯಲ್ಲಿ ನಿಲ್ಲಿಸಿ ಕಸವನ್ನು ತೆಗೆದುಕೊಂಡು ಹೋಗಬೇಕಾಗಿತ್ತು. ಅದಕ್ಕಾಗಿ ನಮ್ಮ ಟೆಂಪೋವನ್ನು ಹತ್ತಿರದ ರಸ್ತೆಯಲ್ಲಿ ನಿಲ್ಲಿಸಿ ಅದರಿಂದ 10 ಚೀಲಗಳನ್ನು ಕೆಳಗೆ ಇಳಿಸಿದ್ದೆವು. ಆಗ ಆರೋಪಿ ಅಲ್ಲಿಗೆ ದ್ವಿಚಕ್ರ ವಾಹನದಲ್ಲಿ ಬಂದಿದ್ದ. ಆತ ಚಾಸಾ-1 ಅವರೊಂದಿಗೆ ಅಲ್ಲಿಯೇ ಜಗಳ ಮಾಡಿದ್ದ. ಆತ ಏನು ಜಗಳ ಮಾಡಿದ್ದ, ಆಗ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ. ಆಗ ನಾನು ಟೆಂಪೋದ ಲೋಡನ್ನು ಇಳಿಸುತ್ತಿದ್ದೆ. ಆದಿನ ಚಾಸಾ-1 ಇವರ ಕೈಯಲ್ಲಿದ್ದ ಮೊಬೈಲ್ ನ್ನು ಬೀಸಾಡಿತ್ತು. ಅದನ್ನು ಯಾರು ಬೀಸಾಡಿದ್ದರು ಎಂದು ಗೊತ್ತಿಲ್ಲ. ಅದು ಹಾಳಾಗಿತ್ತು.

3) ಅರೋಪಿ ಆದಿನ ಅಲ್ಲಿ ನಾವು ಕಸ ಹಾಕುತ್ತಿದ್ದುದ್ದಕ್ಕಾಗಿ ತಂಟೆಗಳನ್ನು ಮಾಡಿದ್ದರು. ಆ ಕಸವನ್ನು ಆದಿನ ಅಲ್ಲಿಂದ ಪುನಃ ತಂದು ಹಳೇಯ ವಿಲೇವಾರಿ ಘಟಕದಲ್ಲಿ ಹಾಕಿದ್ದೆವು. ಆದಿನ ಗಲಾಟೆಯಾದ ಸ್ವಲ್ಪ ಹೊತ್ತಿಗೆ ಪಿ ಡಿ ಓ ಬಂದಿದ್ದರು. ಬೇರೆಯವರು ಬಂದಿದ್ದು ನನಗೆ ಗೊತ್ತಿಲ್ಲ. ಆದಿನ ಚಾಸಾ-1 ಆಸ್ಪತ್ರೆಗೆ ಹೋಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ -1, ಆರೋಪಿಯ ಮೇಲೆ ಕೊಟ್ಟ ದೂರಿನ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾಸಾ-1 ಯಾವ ಜಾತಿಗೆ ಸೇರಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಯಾವ ಜಾತಿಗೆ ಸೇರಿದ್ದಾನೆ ಎಂದು ಗೊತ್ತಿಲ್ಲ. ಪೊಲೀಸರು ಆದಿನ ನನ್ನನ್ನು ವಿಚಾರಿಸಿಲ್ಲ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಸರಕಾರಿ ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲುಃ ಸರಕಾರಿ ಅಭಿಯೋಜಕರಿಂದಃ**

1) ಆರೋಪಿ ಆದಿನ ಬಂದು ಚಾಸಾ -1 ಇವರೊಂದಿಗೆ ಜಗಳ ಮಾಡಿದಾಗ ಬೆಳಗ್ಗಿನ ಸುಮಾರು 8.45 ರ ಸಮಯ ಆಗಿರಬಹುದು. ಆಗ ಅಲ್ಲಿಗೆ ಸ್ಕೂಟಿಯಲ್ಲಿ ಬಂದಿದ್ದ ಆರೋಪಿ ಚಾಸಾ-1 ಇವರಿಗೆ ಇದು ಯಾರ ಅಪ್ಪನ ಜಾಗ ಎಂದು ಕಸ ಹಾಕುತ್ತಿದ್ದೀರಿ ಎಂದು ಹೇಳಿದ್ದ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1, ಆ ಜಾಗೆಯನ್ನು ಪಂಚಾಯಿತಿಯವರು ತೋರಿಸಿಕೊಟ್ಟಿದ್ದಾರೆಂದು, ಅದಕ್ಕಾಗಿ ಕಸ ಹಾಕುತ್ತಿರುವುದಾಗಿ ಹೇಳಿ, ಪಿ ಡಿ ಓ ಇವರಿಗೆ ಫೋನ್ ಮಾಡಲು ಫೋನ್ ತೆಗೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ಆರೋಪಿ, ನಮ್ಮ ಬಳಿ ನಮಗೆ ಹಲ್ಲೆ ಮಾಡಲು ಬರುತ್ತಿದ್ದಾಗ ಚಾಸಾ -1 ನಮ್ಮ ಮೈ ಮುಟ್ಟಬಾರದು ಎಂದು ತಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ಆರೋಪಿ ಚಾಸಾ-1 ಇವರಿಗೆ ಸೂಳೇ , ರಂಡೇ ಎಂದು ಬೈಯುತ್ತಾ, ಕೀಳು ಜಾತಿಯ ನಿಮಗೆ ಮಾಡಲು ಬೇರೆ ಕೆಲಸ ಸಿಗುವುದಿಲ್ಲ ಎಂದು, ಬೈದು ಜಾತಿ ನಿಂದನೆ ಮಾಡಿ, ಕೈಗಳಿಂದ ಕೆನ್ನೆಗೆ ಹಲ್ಲೆ ಮಾಡಿದ್ದ ಎಂದರೆ ಗೊತ್ತಿಲ್ಲ. ಆಗ ಚಾಸಾ-1 ಪಿ ಡಿ ಓ ಇವರಿಗೆ ಫೋನ್ ಮಾಡುತ್ತಿದ್ದಾಗ, ಆರೋಪಿ ಅದನ್ನು ಕಿತ್ತುಕೊಂಡು ಎಸೆದಿದ್ದ ಎಂದರೆ, ಎಸೆದಿದ್ದನ್ನು ನೋಡಿದ್ದೇನೆ. ಇನ್ನೊಮ್ಮೆ ಈ ಜಾಗಕ್ಕೆ ಬಂದರೆ ಕೈಕಾಲು ಕಡಿದು ಹಾಕುವುದಾಗಿ ಚಾಸಾ-1 ಇವರಿಗೆ ಬೆದರಿಕೆ ಹಾಕಿದ್ದ ಎಂದರೆ ಗೊತ್ತಿಲ್ಲ. ಆಗ ಆ ಜಾಗೆಗೆ ಚಾಸಾ-6 ಬಂದಾಗ ಆರೋಪಿ ಅಲ್ಲಿಂದ ಹೋಗಿದ್ದ ಎಂದರೆ ಗೊತ್ತಿಲ್ಲ. ಆದಿನ ಚಾಸಾ-1 ಪಡುಬಿದ್ರೆ ಸರಕಾರಿ ಆಸ್ಪತ್ರೆ ಮತ್ತು ಜಿಲ್ಲಾ ಆಸ್ಪತ್ರೆಯಲ್ಲಿ ಉಪಚಾರ ಪಡೆದಿದ್ದರು ಎಂದರೆ ಸರಿಯಲ್ಲ. ಆ ವಿಷಯ ನನಗೆ ಗೊತ್ತು ಎಂದರೆ ಸರಿಯಲ್ಲ. ಅದಕ್ಕಾಗಿ 28-02-2022 ರಂದು ಈಗ ಓದಿದ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಶಾನೆ ಪಿ-7 ಎಂದು ಗುರುತಿಸಿದೆ.

2) ನನಗೆ ನಿಪಿ-7 ರ ವಿಷಯಗಳ ಮಾಹಿತಿ ಇದ್ದರೂ ಸಹ ಈಗ ನಾನು ಆರೋಪಿಯೊಂದಿಗೆ ಶಾಮೀಲಾಗಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರವಾಗಿ: ಶ್ರೀ ಟಿ.ವಿ.ಕೆ.ಎಸ್. ವಕೀಲರು ದ.ಪ್ರ.ಸಂ 231(2)ರ ಅರ್ಜಿ ಸಲ್ಲಿಸಿದ್ದರಿಂದ ಮುಂದೂಡಲಾಗಿದೆ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.